


# ಬಿದಿರ ಚಿತ್ತಾರ

ಬಿದಿರ ಚಿತ್ತಾರ ನೋಡಲು ಆಕರ್ಷಕ. ಕಚೇರಿಯ ಫೈಲ್‌ಗಳಿಂದ ಹಿಡಿದು ಗೋಡೆಯ ಗಡಿಯಾರದವರೆಗೂ ಬಿದಿರು ಲಗ್ಗೆ ಇಟ್ಟಿದೆ.





ಚಿತ್ರ-ಲೇಖನ:
**ಜಿ.ಎಂ. ಬೊಮ್ನಳ್ಳಿ**

ಬಿದಿರು (ಬೊಂಬು) ಗೊತ್ತಿಲ್ಲದವರೇ ಇಲ್ಲ. ಬಡವನ ಮರವೆಂದು ಹೆಸರಾದ ಬಿದಿರು ಇಂದು ಕುಶಲಕರ್ಮಿಗಳ ಕೈಯಲ್ಲಿ ವೈವಿಧ್ಯ ಕಲೆಯಾಗಿ, ಕಲಾಕೃತಿಯಾಗಿ, ಗೃಹೋಪಯೋಗಿ ವಸ್ತುವಾಗಿ, ಕೃಷಿ ಸಲಕರಣೆಗಳಾಗಿ ಅಪಾರ ಬೇಡಿಕೆ ಪಡೆದುಕೊಳ್ಳುತ್ತಿದೆ. ಒಂದು ಕಾಲದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ರೈತನ ಕೃಷಿ ಕಾರ್ಯಗಳಿಗೆ, ದಿನನಿತ್ಯದ ಬಳಕೆಗೆ ಸೀಮಿತವಾಗಿದ್ದ ಬಿದಿರು ಇಂದು ಶ್ರೀಮಂತನ ಮನೆಯನ್ನು ಪ್ರವೇಶಿಸುವ ಮಟ್ಟಕ್ಕೆ ತನ್ನ ವ್ಯಾಪ್ತಿ ಹೆಚ್ಚಿಸಿಕೊಂಡಿದೆ.

ಬಿದಿರಿನಿಂದ ಏನೆಲ್ಲ ಮಾಡಬಹುದು ಎಂಬುದಕ್ಕೆ ಈಗ ಯಾವ ಮಿತಿಯೂ ಉಳಿದಿಲ್ಲ. ಕಚೇರಿಯ ಫೈಲ್‌ಗಳಿಂದ ಹಿಡಿದು ಗೋಡೆಯ ಗಡಿಯಾರದವರೆಗೂ ಬಿದಿರು ಲಗ್ಗೆ ಇಟ್ಟಿದೆ. ಯಾವುದೇ ವಿಶೇಷ ಮೇಳ, ಉತ್ಸವಗಳು ನಡೆದರೆ ಸ್ವಾಗತ ಕಮಾನಿನಿಂದ ಹಿಡಿದು, ವೇದಿಕೆಯಲ್ಲಿನ ಆಮಂತ್ರಿತ ಗಣ್ಯರಿಗೆ ಕೊಡುವ ನೆನಪಿನ ಕಾಣಿಕೆವರೆಗೂ ಬಿದಿರು ಬೇಕಾಗುತ್ತದೆ. ವನವಾಸಿಗಳು, ಮೇದಾರ ಜನಾಂಗಗಳ ಕಸುಬಿಗೆ, ಜೀವನಕ್ಕೆ ಆಧಾರವಾಗಿದ್ದ ಬಿದಿರು ಈಗ ಸಾವಿರಾರು ಕುಶಲಕರ್ಮಿಗಳ ಕೈಗೆ ಬಂದು ಒಂದು ಉದ್ಯೋಗಕ್ಕೂ ಕಾರಣವಾಗಿದೆ. ಬಿದಿರಿನ ಮೌಲ್ಯವರ್ಧನೆ ನಾನಾ ರೂಪದಲ್ಲಿ ನಡೆದಿದೆ. ಬಿದಿರಿನ ವಸ್ತುಗಳ ಗುಣಮಟ್ಟಕ್ಕೆ ತಕ್ಕಂತೆ ಉತ್ತಮ ಬೆಲೆಯೂ ಸಿಗುತ್ತದೆ.

ಗ್ರಾಮೀಣ ಆರ್ಥಿಕ ವ್ಯವಸ್ಥೆಯಲ್ಲಿ ಬಿದಿರು ಬಹಳ ಮಹತ್ವದ ಪಾತ್ರ ನಿರ್ವಹಿಸುತ್ತಿರುವುದನ್ನು ಮನಗಂಡ ಭಾರತ ಸರಕಾರವು ಕೃಷಿ ಮತ್ತು ಸಹಕಾರಿ ಮಂತ್ರಾಲಯದ ಅಡಿಯಲ್ಲಿ 'ರಾಷ್ಟ್ರೀಯ ಬಿದಿರು ಯೋಜನೆ' ಎಂಬ ಕಾರ್ಯಕ್ರಮ ರೂಪಿಸಿದೆ. ಬಿದಿರು ಬೆಳೆಸುವುದು ಮತ್ತು ಬಿದಿರಿನ ಗುಡಿ ಕೈಗಾರಿಕೆಗೆ ಪ್ರೋತ್ಸಾಹ ನೀಡುವುದು ಮಿಷನ್‌ನ ಉದ್ದೇಶವಾಗಿದೆ. 'ಹಸಿರು ಬಂಗಾರ'ವೆಂದೇ ಕರೆಯಲಾಗುವ ಬಿದಿರಿನ ಉತ್ಪನ್ನಗಳಿಗೆ ಬಂಗಾರದಂತೆ ಬೆಲೆಯೂ ಬರುವಂತಾಗಲಿ. ■